ಹರಿತಸ, ಬೆಂಗಳೂರು

ಮೆಸೇಜ್‌ಗೂ, ಮಸಾಜ್‌ಗೂ ವ್ಯತ್ಯಾಸವೇನು?



ಮೆಸೇಜ್ ಮಿತವಾಗಿರಬೇಕು; ಮಸಾಜ್ ಹಿತವಾಗಿರಬೇಕು.

ಕೆ.ಎಸ್. ಸೋಮೇಶ್ವರ, ಬೆಂಗಳೂರು

ಯೋಗರಾಜಭಟ್ಟರು ಮುಂಗಾರು ಮಳೆ 1, 2 ತೆಗೆದಿದ್ದಾರಲ್ಲ, ಅವರಿಗೆ ಹಿಂಗಾರು ಮಳೆ ಆಗಿಬರಲ್ಲವೆ?

ಕೃಷಿಯಲ್ಲಾಗಲಿ, ಖುಷಿಯಲ್ಲಾಗಲಿ, ಮುಂಗಾರಿನ ಬಿತ್ತನೆಯೇ ಕನ್ನಡನಾಡಿಗೆ ಹೆಚ್ಚು ಫಲಪ್ರದವಂತೆ.

ವಿಜಯಕುಮಾರ್ ಎಚ್.ಕೆ. ರಾಯಚೂರು

ಪಾಯ್ಸನ್‌ಗೂ ಎಕ್ಸ್‌ಪೈರಿ ಡೇಟ್ ಇದೆಯಲ್ಲಾ...?

ಅದು ರಾಜ್‌ಕುಮಾರ್ ಚಿತ್ರದ ವಿಲನ್‌ನಂತೆ – ವಿಲನ್ ಇರುತ್ತಾನೆ, ಕೇಡು ಸತ್ತಿರುತ್ತದೆ.

ಬಾ.ರಂ. ಸುರೇಶ, ಶಿವಮೊಗ್ಗ

ಗಂಡಹೆಂಡಿರ ಜಗಳ ಉಂಡು ಮಲಗುವ ತನಕ ಎಂದಿದ್ದರೂ ಬೆಳಗಿನವರೆಗೂ ಜಗಳವಾಡುವುದರ ಕಾರಣ?



ಸ್ಪೈಸಿ ಫುಡ್‌ನಿಂದ ಅಸಿಡಿಟಿಯಾಗಿ ನಿದ್ರೆ ಬಂದಿರುವುದಿಲ್ಲವಂತೆ.

ತಿಮ್ಮರಾಜು, ದಾವಣಗೆರೆ

ಅರ್ಧ ಸತ್ಯ ಒಳ್ಳೆಯದೋ, ಪೂರ್ತಿ ಸುಳ್ಳು ಒಳ್ಳೆಯದೋ?

ವ್ಯಾಪಾರದಲ್ಲಿ ಮೊದಲನೆಯದು; ಕಟಕಟೆಯಲ್ಲಿ ಎರಡನೆಯದು.

ಮಹಾವೀರ ಕಾಸರ, ಶಿವಮೊಗ್ಗ

ಪೊಲೀಸ್ ಠಾಣೆಯಲ್ಲಿ 'ಸುಸ್ವಾಗತ' ಫಲಕ ಹಾಕಿರುವುದು ಎಷ್ಟು ಸೂಕ್ತ?

ಅವರಿಗೆ ಉದ್ಯೋಗ ನೀಡುವ ಕಳ್ಳ, ಸುಳ್ಳ, ಭ್ರಷ್ಟರಿಗೆ ಮಿನಿಮಮ್ ಕರ್ಟಸಿ ತೋರಿಸಬೇಕಲ್ಲವೇ!

ಪಿ.ಎನ್. ಶ್ರೀವತ್ಸ, ಬೆಂಗಳೂರು

ಸತ್ತಾಗ ನೋಡಲು ಬಂದವರನ್ನು ತಿಥಿಗೆ ಕಡ್ಡಾಯವಾಗಿ ಕರೆಯಲೇಬೇಕೆ?

ಸತ್ತವನಿಗೆ ಸಾಲ ಕೊಟ್ಟವರನ್ನು ಕರೆಯಬೇಕಾಗಿಲ್ಲ – ಅವರು ಮಾತಿನಲ್ಲೇ ತಿಥಿ ಮಾಡಿಬಿಟ್ಟಿರುತ್ತಾರೆ.

ದಿನೇಶ್, ಗುಡ್ಡದೂರು

ಟೀವಿ ಮಾಧ್ಯಮಗಳಲ್ಲಿ ಊಟಕ್ಕೆ 'ಬ್ಯಾಟಿಂಗ್' ಎನ್ನಲು ಕಾರಣವೇನು?

'ಬೌಲ್'ನಲ್ಲಿ (ಪಾತ್ರೆ) ಮಾಡಿದ್ದನ್ನು ಕಟ್ ಮಾಡಿಕೊಂಡು ಸಿಂಗಲ್, ಡಬಲ್‌ಗಳನ್ನು ಪಡೆಯುವುದರಿಂದ.

ಕಾವ್ಯಶ್ರೀ ಪತ್ರಿಮಠ, ಸುರಪುರ

ಜನನ–ಮರಣದ ನಡುವಿನ ಬದುಕು ಹೂವಿನ ತೋರಣವಾಗಬೇಕೆಂದರೆ?

ರಣ ದೂರವಿರಿಸಿ, ತೋರ ಆಗದೆ, ಹೆಚ್ಚು ಹೆಚ್ಚು ಹ್ಞೂ ಎನ್ನುವುದನ್ನು ಅಭ್ಯಸಿಸಬೇಕು.

ಕೆ.ವಿ. ಗೋವಿಂದಾಚಾರಿ, ಮೈಸೂರು

ಮದ್ಯದಲ್ಲಿ ಕೆಲವಕ್ಕೆ ಡಾಕ್ಟರ್ಸ್ ಸ್ಪೆಷಲ್, ಟೀಚರ್ಸ್ ಸ್ಪೆಷಲ್ ಎಂದೆಲ್ಲ ಹೆಸರಿರುವುದೇಕೆ?

ಗುರುಗಳು, ವೈದ್ಯರು ಹೇಳಿದ್ದರಿಂದ ಬೇಜಾರಾದಾಗ ಅವನ್ನು ಕುಡಿದರೆ ಎಕ್ಸ್‌ಟ್ರಾ ಕಿಕ್ ಕೊಡುವುವಂತೆ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

ಮನುಷ್ಯನನ್ನು ಮಂಗಕ್ಕೇ ಯಾಕೆ ಹೋಲಿಸುತ್ತಾರೆ?

ಜೀವನ ಆರಂಭವಾಗುವುದೇ 'ಮಗ' ಆಗಿ; ಮಧ್ಯೆ ವಿವೇಕಶೂನ್ಯತೆ ಸೇರಿದಾಗ ಮ–ಂ–ಗ!

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ದಿಕ್ಕೇ ತೋಚುತ್ತಿಲ್ಲವೆಂದರೆ ಏನು ಮಾಡುವುದು ಸರ್?

ಜಿಪಿಎಸ್ ಆನ್ ಮಾಡಿ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಉತ್ತೀರ್ಣತೆಯೇ ಇಲ್ಲದ ಶಿಕ್ಷಣ ಯಾವುದು?

ಪತಿಗೆ ಮಡದಿ ನೀಡುವ ಕಟುಮೌಲ್ಯಮಾಪನ ಇರುವ ಶಿಕ್ಷಣ.

## ವಾರದ ಪ್ರಶ್ನೆ

ಬಿ.ಎಂ. ಸುಬ್ಬಣ್ಣ, ಬೆಂಗಳೂರು

ನಿಮ್ಮ ದನದ ಕೊಟ್ಟಿಗೆಗೆ ಸಿಮೆಂಟ್ ಶೀಟುಗಳನ್ನೇ ಬಳಸಿ ಎಂದು ಫಲಕ ಹಾಕಿದ್ದಾರಲ್ಲ?

ಗುಡ್. ಶೀಟು ಕಾದು ಹಸುವಿಗೂ ಬೇಸಿಗೆಯಲ್ಲಿ ಬಿಸಿಯೂಟದ ಭಾಗ್ಯ ದೊರಕುತ್ತದೆ.

ಎಸ್.ಸಿ. ರಮೇಶ್, ಮೈಸೂರು

ಮಂತ್ರಿಯನ್ನು ಕೋರ್ಟ್‌ಗೆಳೆದಾಗ ಗದ್ದಲವೆಬ್ಬಿಸಿ ಜನಜೀವನಕ್ಕೆ ಅಡ್ಡಿಪಡಿಸುವವರ ವಿರುದ್ಧ ಕ್ರಮ ಕೈಗೊಳ್ಳಲು ಹಿಂದೇಟೇಕೆ?

ಕುರುಡುದೇವತೆಯು ಕುರುಡು ಕಾಂಚಾಣದ ಅಬ್ಬರಕ್ಕೆ ಮೌನಿಯಾಗುವಳಂತೆ.

ಸುರೇಶ್ ಬಿ.ವಿ. ಬೆಂಗಳೂರು

ಮಗಳ ಮಾತನ್ನು ಅಳಿಯ ಕೇಳಿದರೆ ಗುಡ್‌ಬಾಯ್. ಸೊಸೆಯದನ್ನು ಮಗ ಕೇಳಿದರೆ ಹೆನ್‌ಪೆಕ್ಡ್. ಇದು ಯಾವ ನ್ಯಾಯ?

ಫ್ಯಾಮಿಲಿ ಕಾನ್ಸ್‌ಟಿಟ್ಯೂಷನ್ನಲ್ಲಿ ಮದರ್ ಪೀನಲ್ ಕೋಡ್ ನಿರ್ಣಯಿಸಿರುವ ನ್ಯಾಯ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

ಅಪರಾತ್ರಿಯಲ್ಲಿ ಒಂಟಿನಾಯಿ ಬೊಗಳುವುದು ಬೇರೆಯವರನ್ನು ಹೆದರಿಸಲೋ? ತನ್ನೊಳಗಿನ ಭಯಕ್ಕೋ?



ಮನುಷ್ಯರು ಸುಖವಾಗಿ ನಿದ್ರಿಸುವುದನ್ನು ಕಂಡು ಉಂಟಾದ ಹೊಟ್ಟೆಕಿಚ್ಚಿಗೆ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ವಯಸ್ಸಾದ ಮುದುಕ ಮುದುಕಿಯರೇಕೆ ನೀಟಾಗಿ ಮೇಕಪ್ ಮಾಡಿಕೊಳ್ಳುತ್ತಾರೆ?

'ನಗ್ತಾಯಿರ್‍ಬೇಕು ನನ್ನ ಹೆಣ್ತಿ' ಎಂದರು ಕೈಲಾಸಂ. ಪ್ರೆಸೆಂಟೆಬಲಿಟಿ ಪರ್ಸನಾಲಿಟಿಗೆ ಪ್ಲಸ್ ಪಾಯಿಂಟು.

■ ರಾಮ್